ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ಅವ್ಯಕ್ತ ಮುರಳಿ 25-01-1994.

# *ವಿಶೇಷತೆಯೇ ಬ್ರಾಹ್ಮಣರ ಸ್ವಭಾವವಾಗಿದೆ - ಇದನ್ನು ಸ್ವಾಭಾವಿಕವಾಗಿ ಸ್ಮೃತಿ ಸ್ವರೂಪವನ್ನಾಗಿ ಮಾಡಿಕೊಳ್ಳಿರಿ*

(ब्राहमणों की नेचर विशेषता की नेचर है - इसे नेचरल स्मृति-स्वरूप बनाओ)

**ಭಾಗ್ಯದ ಶ್ರೇಷ್ಠ ರೇಖೆಯನ್ನು ಬರೆಯುವ ಲೇಖನಿಯನ್ನು ಕೊಡುವ ಭಾಗ್ಯವಿಧಾತ ಬಾಬಾ ವಿಶೇಷ ಭಾಗ್ಯವಾನ್ ಆತ್ಮರೊಂದಿಗೆ ಮಾತನಾಡುತ್ತಿದ್ದಾರೆ.**

ಇಂದು ಬಾಪ್‌ದಾದಾರವರು ವಿಶ್ವದ ವಿಶೇಷ ಅತ್ಮರೆಲ್ಲರನ್ನೂ ನೋಡುತ್ತಿದ್ದಾರೆ. ಡ್ರಾಮಾನುಸಾರ ವಿಶೇಷ ಆತ್ಮರಾದ ತಮಗೆ ಎಷ್ಟೊಂದು ವಿಶೇಷವಾದ ಪಾತ್ರವು ನೊಂದಣಿಯಾಗಿದೆ. ಇಂದು ಬಾಪ್‌ದಾದಾರವರು ಪ್ರತಿಯೊಂದು ಮಕ್ಕಳ ವಿಶೇಷತೆಗಳನ್ನು ನೋಡುತ್ತಾ ಹರ್ಷಿತವಾಗುತ್ತಿದ್ದಾರೆ. ಪ್ರತಿಯೊಬ್ಬ ಮಗುವನ್ನು ನೋಡುತ್ತಾ "ವಾಹ್ ಮಗು" ಎಂಬ ಸ್ನೇಹದ ಹಾಡು ಹೃದಯದಲ್ಲಿ ಮೊಳಗುತ್ತಿತ್ತು. ಜೊತೆಜೊತೆಗೆ ಮಕ್ಕಳ ಹೃದಯದಿಂದ ಈ 'ವಾಹ್-ವಾಹ್'ನ ಹಾಡು ಸದಾ ಬರುತ್ತದೆಯೇ? ಎಂದು ನೋಡುತ್ತಿದ್ದರು. ಪ್ರತೀ ಕರ್ಮದಲ್ಲಿ, ಪ್ರತೀ ಹೆಜ್ಜೆಯಲ್ಲಿ, ಪ್ರತೀ ಸಂಕಲ್ಪದಲ್ಲಿಯೂ ಈ ಶ್ರೇಷ್ಠವಾದ ಅನುಭವ ಆಗುತ್ತದೆಯೇ ಅಥವಾ ಕೆಲವೊಮ್ಮೆ ಆಗುತ್ತದೆಯೇ? ಸಾಧಾರಣ ಜೀವನದಿಂದ ಸದಾ ಹಾಗೂ ಸ್ವತಹವಾಗಿಯೇ ವಿಶೇಷವಾದ ಜೀವನವಿರುತ್ತದೆಯೇ ಅಥವಾ ಸ್ಮೃತಿ ತರಿಸುವುದರಿಂದ ಅನುಭವ ಆಗುತ್ತದೆಯೇ? ಜೀವನ ಎನ್ನುತ್ತಿದ್ದೀರಿ, ಜೀವನ ಅರ್ಥಾತ್- ಸದಾ ಹಾಗೂ ಸ್ವತಹವಾಗಿರುವುದು. ಸ್ಮೃತಿಯಲ್ಲಿ ಬಂದಾಗ ಅನುಭವ ಮಾಡಿದಿರಿ ಮತ್ತು ವಿಸ್ಮೃತಿಯಾದಾಗ ವಿಶೇಷತೆಗೆ ಬದಲಾಗಿ ಸಾಧಾರಣ ಜೀವನ ಅನುಭವವಾಯಿತು- ಇದು ವಿಶೇಷ ಆತ್ಮರ ವಿಶೇಷತೆಯಲ್ಲ. ಬ್ರಾಹ್ಮಣ ಜನ್ಮವಾಗುತ್ತಿದ್ದಂತೆಯೇ ವಿಶೇಷ ಜನ್ಮವಾಯಿತು, ಯಾರ ಜನ್ಮವೇ ವಿಶೇಷವಾಗಿದೆಯೋ ಅವರ ಜೀವನ ಹೇಗಿರುತ್ತದೆ? ವಿಶೇಷವಾಗಿರುತ್ತದೆಯೇ ಅಥವಾ ಸಾಧಾರಣವಾಗಿರುತ್ತದೆಯೇ? ಬ್ರಾಹ್ಮಣ ಜನ್ಮವೂ ಶ್ರೇಷ್ಠ. ಬ್ರಾಹ್ಮಣ ಧರ್ಮವೂ ಶ್ರೇಷ್ಠ ಹಾಗೂ ಬ್ರಾಹ್ಮಣ ಕರ್ಮವೂ ಶ್ರೇಷ್ಠವಾದುದು ಏಕೆಂದರೆ ಬ್ರಾಹ್ಮಣ ಜನ್ಮದಾತಾ, ಬ್ರಾಹ್ಮಣ ಧರ್ಮ ಸ್ಥಾಪಕರು ಸರ್ವ ಶ್ರೇಷ್ಠ ಪರಮ ಆತ್ಮ ಹಾಗೂ ಆದಿ ಆತ್ಮ ಬ್ರಹ್ಮಾ ತಂದೆಯಾಗಿದ್ದಾರೆ. ರಚಯಿತನು ಸರ್ವಶ್ರೇಷ್ಠವೆಂದ ಮೇಲೆ ರಚನೆಯೂ ಸರ್ವಶ್ರೇಷ್ಠ ಅರ್ಥಾತ್ ವಿಶೇಷವಾದುದೇ ಆಗಿರುತದೆ. **ಬ್ರಾಹ್ಮಣರ ಕರ್ಮ ವಿಶೇಷವಾದುದು- ಏಕೆ? ಏಕೆಂದರೆ ಕರ್ಮವನ್ನು ಅನುಸರಿಸುವುದಕ್ಕಾಗಿ ತಮ್ಮೆಲ್ಲರ ಮುಂದೆ ಆದಿ ಆತ್ಮ ಬ್ರಹ್ಮಾ ತಂದೆಯು ಉದಾಹರಣೆ ಆಗಿದ್ದಾರೆ. ಕರ್ಮದಲ್ಲಿ ಸಾಕಾರ ಬ್ರಹ್ಮಾತಂದೆಯನ್ನು ಅನುಸರಿಸುತ್ತೀರಿ ಆದ್ದರಿಂದ ಭಾಗ್ಯ ವಿಧಾತಾ ಅರ್ಥಾತ್ ಕರ್ಮದ ಮೂಲಕ ಭಾಗ್ಯದ ರೇಖೆಯನ್ನು ಶ್ರೇಷ್ಠ ಮಾಡಿಸುವವರೆಂದು ಬ್ರಹ್ಮಾರವರ ಮಹಿಮೆ**

**ಮಾಡಿದ್ದಾರೆ.** ಆದ್ದರಿಂದ ತಾವೆಲ್ಲರೂ ವಿಶೇಷ ಪುರುಷಾರ್ಥದ ಶಬ್ದದಲ್ಲಿ ಇದನ್ನೇ ವರ್ಣಿಸುತ್ತೀರಿ- ತಂದೆಯ ಸಮಾನರಾಗಬೇಕು.

ಈ ಅವ್ಯಕ್ತ ವರ್ಷದಲ್ಲಿ ಎಲ್ಲರ ಲಕ್ಷ್ಯವೇನಾಗಿರುತ್ತದೆ? ನಿರಾಕಾರಿ ಸ್ಥಿತಿಯಲ್ಲಿ ನಿರಾಕಾರ ತಂದೆಯ ಸಮಾನ ಅಶರೀರಿ ಸ್ಥಿತಿಯ ಅನುಭವ ಮಾಡಿದ್ದೀರಾ? ಸಾಕಾರ ಕರ್ಮದಲ್ಲಿ ಬ್ರಹ್ಮಾ ತಂದೆಯವರ ಸಮಾನರಾಗುವ ನಂಬರ್‌ವಾರ್ ಅನುಭವವಾಯಿತೇ? ವಿಶೇಷ ಜೀವನದ ಆಧಾರ- ವಿಶೇಷ ಜನ್ಮ, ಧರ್ಮ ಹಾಗೂ ಶ್ರೇಷ್ಠ ಕರ್ಮವಾಗಿದೆ. ಹೇಗೆ ಲೌಕಿಕ ಜೀವನದಲ್ಲಿಯೂ ಒಂದುವೇಳೆ ಯಾವುದೇ ಅತ್ಮನ ಜನ್ಮವು ವಿಶೇಷ ರಾಜರ ಪರಿವಾರದಲ್ಲಾಯಿತು, ರಾಜಕುಮಾರರೇ ಆಗಿರಲಿ ಅಥವಾ ರಾಜಕುಮಾರಿಯೇ ಆಗಿರಲಿ, ಇದು ವಿಶೇಷತೆಯ ಜನ್ಮವಾಗಿರುವ ಕಾರಣದಿಂದ ಪ್ರತೀ ಸಮಯ ಹಾಗೂ ಸದಾ ಸ್ವತಹವಾಗಿರುತ್ತದೆಯೇ ಅಥವಾ ಮತ್ತೆ-ಮತ್ತೆ ಸ್ಮೃತಿಯಲ್ಲಿ ನಾನು ರಾಜಕುಮಾರಿ ಎಂದು ನೆನಪು ಮಾಡಿಕೊಳ್ಳಬೇಕಾಗುವುದೇ ಸಹಜವಾಗಿಯೇ ನೆನಪಿರುತ್ತದೆಯಲ್ಲವೆ. ಪುರುಷಾರ್ಥ ಮಾಡುವಿರಾ? ಭಲೆ ತಮಗಿಷ್ಟವಿರುವ ಕರ್ಮವು ಎಷ್ಟೇ ಸಾಧಾರಣವಾಗಿರಲಿ ಆದರೆ ತನ್ನ ಜನ್ಮದ ವಿಶೇಷತೆಯು ಮರೆತುಹೋಗುವುದೇ? ಸ್ವಾಭಾವಿಕ ಹಾಗೂ ಸ್ವಭಾವವಾಗಿಬಿಡುತ್ತದೆ. ಅಂದಮೇಲೆ ತಾವು ಬ್ರಾಹ್ಮಣ ಆತ್ಮರ ಸ್ವಭಾವವೇನಾಗಿದೆ? ವಿಶೇಷವಾದುದೇ ಅಥವಾ ಸಾಧಾರಣವೇ? ಈಗಲೂ ಕೆಲಕೆಲವು ಮಕ್ಕಳು ಯಾವುದೇ ಸಾಧಾರಣ ಕರ್ಮವನ್ನು ಮಾಡಿಬಿಡುತ್ತಾರೆಯೋ ಆಗ ಬಾಪ್‌ದಾದಾರವರ ಮುಂದೆ, ತನ್ನನ್ನು ನಿರ್ದೋಷಿಯೆಂದು ಸಿದ್ಧ ಮಾಡುವುದಕ್ಕಾಗಿ ಏನು ಹೇಳುತ್ತಾರೆ? ನಾನು ಈ ಕರ್ಮವನ್ನು ಮಾಡಬೇಕೆಂದು ಬಯಸುತ್ತಿರಲಿಲ್ಲ ಆದರೆ ನನ್ನ ಸ್ವಭಾವವಾಗಿರುವ ಕಾರಣದಿಂದ ಆಗಿಬಿಟ್ಟಿತು. ಹಾಗೆನೋಡಿದರೆ ಈ ರೀತಿ ಹೇಳುವುದು ಅಥವಾ ಚಿಂತನೆ ಮಾಡುವುದು ಯಥಾರ್ಥವಾದುದೆ!? ನಾನು ಯಾರು? ಬ್ರಾಹ್ಮಣ ಜೀವನದವರಲ್ಲವೇ ಅಂದಮೇಲೆ ನನ್ನ ಇಂತಹ ಸ್ವಭಾವವಿದೆ ಎಂದು ಯೋಚಿಸಲು ಸಾಧ್ಯವೇ? ಈ ರೀತಿ ಹೇಳುವುದು ಸರಿಯೇ ಹಾಗಾದರೆ ಆ ಸಮಯದಲ್ಲಿ ಏನು ಹೇಳುತ್ತೀರಿ? ಆ ಸಮಯದಲ್ಲಿ ಬ್ರಾಹ್ಮಣರು ಹೇಳುತ್ತಿಲ್ಲ, ಮಾಯೆ ಮಾತನಾಡುತ್ತಿದೆ. ಅಂದಾಗ ಈ ಸಾಧಾರಣ ಸ್ವಭಾವ ಅಥವಾ ಮಾಯಾವಿ ಸ್ವಭಾವವೇನು ಸ್ವಾಭಾವಿಕವಾಗಿ ಕಾರ್ಯವನ್ನು ಮಾಡಿಬಿಡುತ್ತದೆಯಲ್ಲವೆ, ಆದ್ದರಿಂದ ಹೇಳುತ್ತಾರೆ- ನಾನೇನು ಬಯಸುತ್ತಿರಲಿಲ್ಲ ಆದರೆ ಆಗಿಬಿಟ್ಟಿತು. ಹಾಗಾದರೆ ಬ್ರಾಹ್ಮಣರ ಸ್ವಭಾವವೆಂದರೆ ವಿಶೇಷತೆಯ ಸ್ವಭಾವವೂ ಸ್ವಾಭಾವಿಕವಾಗಿ ಇರಬೇಕು. ಸ್ವಾಭಾವಿಕವಾದ ವಸ್ತುವು ಸದಾಕಾಲ ಇರಲು ಸಾಧ್ಯ. ಹಾಗಾದರೆ ವಿಶೇಷ ಜೀವನದ ಸ್ಮೃತಿಯು ಸ್ವಭಾವದ ರೂಪದಲ್ಲಿ ಸ್ವಾಭಾವಿಕವಾಗಬೇಕಾ ಅಥವಾ ಕೆಲವೊಮ್ಮೆ ಮರೆಯುವುದು, ಕೆಲವೊಮ್ಮೆ ನೆನಪಿರುವಂತೆ ಆಗಬೇಕಾ? ಸದಾ ಸ್ಮೃತಿ ಸ್ವರೂಪದಲ್ಲಿರಿ. ಸ್ಮೃತಿಯಲ್ಲಿ ತಂದುಕೊಳ್ಳುವವರಲ್ಲ. ಸ್ಮೃತಿಸ್ವರೂಪ. ಇದಕ್ಕಾಗಿಯೇ ಬಾಪ್‌ದಾದಾರವರು ನೋಡುತ್ತಿದ್ದರು- ಅವ್ಯಕ್ತ ವರ್ಷದ ಸಮಯದನುಸಾರ ಸಮಾವೇಶವಾದಿರಿ ಆದರೆ ಬಾಪ್‌ದಾದಾರವರ ಸಮಾನ ತಮ್ಮನ್ನು ಸಂಪನ್ನ ಮಾಡಿಕೊಂಡಿದ್ದೀರಾ? ಈ ಅವ್ಯಕ್ತ ವರ್ಷದ ವಿಶೇಷವನ್ನು ಇಟ್ಟುಕೊಂಡಿದ್ದಿರಾ- ಅವ್ಯಕ್ತ ಅರ್ಥಾತ್ ಫರಿಶ್ತಾ ಸ್ವರೂಪರಾಗುವುದು ಮತ್ತು ಅನ್ಯರನ್ನು ಮಾಡುವುದಾಗಿದೆ. ಎಲ್ಲರೂ ಈ ಲಕ್ಷ್ಯವನ್ನಿಟ್ಟಿದ್ದೀರಾ, ನಂತರ ಫಲಿತಾಂಶವೇನಾಯಿತು? ತಮ್ಮನ್ನು ತಾವು ಪರಿಶೀಲನೆ ಮಾಡಿಕೊಂಡಿದ್ದೀರಾ? 'ಫರಿಶ್ತಾ ಭವ'ದ ವರದಾನವೂ

ವರದಾತನಿಂದ ಸಿಕ್ಕಿದೆ ಅಂದಮೇಲೆ ವರದಾನ ಮತ್ತು ಲಕ್ಷ್ಯ- ಇವೆರಡರ ಸ್ಮೃತಿಯಿಂದ ಎಲ್ಲಿಯವರೆಗೆ ಸಫಲತೆಯ ಅನುಭವ ಮಾಡಿದ್ದೀರಿ, ತಮ್ಮ ಈ ಸೂಕ್ಷ್ಮ ಪರಿಶೀಲನೆ ಅಥವಾ ಚಿಂತನೆ ಮಾಡಿದ್ದಿರಾ- ಅವ್ಯಕ್ತ ವರ್ಷ ಸಂಪೂರ್ಣವಾಯಿತು. ಯಥಾಶಕ್ತಿ ಎಷ್ಟೇ ಅನುಭವವಾಗಿರಬಹುದು, ಅದು ಡ್ರಾಮಾನುಸಾರ ಸರಿಯಾಗಿ ಇದ್ದಿತೇ? ವರ್ಷದ ಪರಿವರ್ತನೆಯ ಜೊತೆಜೊತೆಗೆ ಸ್ವಪರಿವರ್ತನೆಯ ಗತಿಯೇನಾಯಿತು- ಈ ವಿಧಿಯಿಂದ ಪರಿಶೀಲನೆ ಮಾಡಿದಿರಾ? ಹೇಗೆ ವರ್ಷವು ಸಮಾಪ್ತಿಯಾಯಿತೋ, ಹಾಗೆಯೇ ತಮ್ಮ ಲಕ್ಷ್ಯ ಹಾಗೂ ಲಕ್ಷಣದಲಿ ಸಂಪನ್ನರಾದಿರಾ ಅಥವಾ ಇದನ್ನು ಯೋಚಿಸುತ್ತೀರಾ- ಈ ವರ್ಷದಲ್ಲಿ ಇನ್ನೇನು ಆಗುವೆವು? ಸಮಯ ಹಾಗೂ ಸ್ವಯಂನ ಗತಿಯು ಸಮಾನವಾಗಿದೆಯೇ? ಹಾಗೆ ನೋಡಿದರೆ ಸಮಯಕ್ಕಿಂತಲೂ ತಮ್ಮ ಗತಿಯು ತೀವ್ರವಾಗಿರಬೇಕು ಏಕೆಂದರೆ ಸಮಾಪ್ತಿಯ ಸಮಯವನ್ನು ಸಮೀಪ ತರುವವರು ವಿಶೇಷ ಆತ್ಮರಾದ ತಾವೇ. ನಿಮಿತ್ತವಾಗಿದ್ದೀರಿ. ತೀವ್ರಗತಿಯಿಂದ ವರ್ಷವಂತು ಸಂಪನ್ನವಾಯಿತು, ಈ ವರ್ಷ ಹೇಗೆ ಪೂರ್ಣವಾಯಿತೆಂಬುದು ತಿಳಿದುಬಂದಿದೆಯೇ? ಹಾಗಾದರೆ ಪರಿಶೀಲನೆ ಮಾಡಿಕೊಳ್ಳಿರಿ- ವಿಶೆಷ ಆತ್ಮನಾದ ನನ್ನ ಪರಿವರ್ತನೆಯ ಗತಿಯು ತೀವ್ರವಾಗಿತ್ತೇ ಅಥವಾ ಕೆಲವೊಮ್ಮೆ ತೀವ್ರ, ಕೆಲವೊಮ್ಮೆ ಮಧ್ಯಮವಾಗಿದ್ದಿತೇ?

ಫರಿಶ್ತಾ ಅರ್ಥಾತ್ ಯಾರ ಸಂಬಂಧವು ಹಳೆಯ ಸಂಸ್ಕಾರ ಹಾಗೂ ಸಂಸಾರದೊಂದಿಗೆ ಇಲ್ಲವೋ ಅವರೇ. ಹಾಗಾದರೆ ಹಳೆಯ ಸಂಸಾರದ ಯಾವುದೇ ಆಕರ್ಷಣೆ, ಭಲೆ ಸಂಬಂಧದ ರೂಪದಲ್ಲಾಗಿರಬಹುದು, ತನ್ನ ದೇಹದ ಕಡೆ ಆಕರ್ಷಣೆ ಅಥವಾ ಕೆಲವೊಮ್ಮೆ ದೇಹಧಾರಿ ವ್ಯಕ್ತಿಯ ಕಡೆ ಆಕರ್ಷಣೆಯಾಗಿರಬಹುದು. ಯಾವುದೇ ವಸ್ತುವಿನ ಕಡೆ ಆಕರ್ಷಣೆ ಆಗಿರಬಹುದು, ಶೇಕಡಾವಾರು ಹೇಗಿತ್ತು? ಎಂಬುದನ್ನು ಪರಿಶೀಲನೆ ಮಾಡಿರಿ. ಇದೇ ರೀತಿ ಹಳೆಯ ಸಂಸ್ಕಾರದ ಆಕರ್ಷಣೆ- ಅದು ಸಂಕಲ್ಪದ ರೂಪದಲ್ಲಿಯೇ ಆಗಿರಬಹುದು. ವೃತ್ತಿಯ ರೂಪದಲ್ಲಾಗಿರಬಹುದು, ವಾಣಿಯ ರೂಪದಲ್ಲಿ, ಸಂಬಂಧ-ಸಂಪರ್ಕದ ರೂಪದಲ್ಲಾಗಿರಬಹುದು ಅರ್ಥಾತ್ ಕರ್ಮದ ರೂಪದಲ್ಲಿ ಶೇಕಡಾವಾರು ಎಷ್ಟಿತ್ತು? ಫರಿಶ್ತಾ ಎಂದರೆ ಡಬಲ್ ಲೈಟ್. ಹಾಗಾದರೆ ಸತ್ಯವಾಗಿ ಪ್ರಕಾಶ ಸ್ವರೂಪವು ಸ್ಮೃತಿ ಸ್ವರೂಪದಲ್ಲಿ ಎಲ್ಲಿಯವರೆಗಿತ್ತು? ಜೊತೆಜೊತೆಗೆ ಲೈಟ್ ಅರ್ಥಾತ್ ಹಗುರತೆ, ಸ್ವಯಂ ಪರಿವರ್ತನೆಯ ಪುರುಷಾರ್ಥದಲ್ಲಿ ಎಲ್ಲಿಯವರೆಗೆ ಲೈಟ್ ಅರ್ಥಾತ್ ಹಗುರತೆಯಿತ್ತು? ಮನಸ್ಸು ಅರ್ಥಾತ್ ಸಂಕಲ್ಪ ಶಕ್ತಿಯಲ್ಲಿ ವ್ಯರ್ಥವನ್ನು ಸಮರ್ಥದಲ್ಲಿ ಪರಿವರ್ತನೆ ಮಾಡುವುದರಲ್ಲಿ ಅರ್ಥಾತ್ ವ್ಯರ್ಥ ಹೊರೆಯನ್ನು ಹಗುರ ಮಾಡಿಕೊಳ್ಳುವುದರಲ್ಲಿ ಎಲ್ಲಿಯವರೆಗೆ ಸಫಲರಾದೆವು? ಇದೇರೀತಿ ವ್ಯರ್ಥ ಸಮಯ, ವ್ಯರ್ಥ ಸಂಗ, ವ್ಯರ್ಥ ವಾತಾವಾರಣ, ಇವೆಲ್ಲದರಲ್ಲಿ ಎಲ್ಲಿಯವರೆಗೆ ಪರಿವರ್ತನೆ ಮಾಡುವುದರಲ್ಲಿ ಹಗುರತೆಯಿತ್ತು? ಬ್ರಾಹ್ಮಣ ಪರಿವಾರದ ಸಂಬಂಧದಲ್ಲಿ, ಸೇವೆಯ ಸಂಬಂಧದಲ್ಲಿ ಎಲ್ಲಿಯವರೆಗೆ ಹಗುರತೆಯಿತ್ತು? ಇದಕ್ಕೆ ಫರಿಶ್ತಾಸ್ಥಿತಿಯ ತೀವ್ರಗತಿಯ ಸ್ಥಿತಿ ಎಂದು ಹೇಳಲಾಗುತ್ತದೆ. ಈ ವಿಧಿಯಿಂದ ಪರಿಶೀಲನೆ ಮಾಡಿಕೊಳ್ಳಿರಿ ಹಾಗೂ ಭವಿಷ್ಯಕ್ಕಾಗಿ ಪರಿವರ್ತನೆ ಮಾಡಿಕೊಳ್ಳಿರಿ. ತಮ್ಮ ಬ್ರಾಹ್ಮಣ ಜನ್ಮದ ವಿಶೇಷತೆಯನ್ನು ಸ್ವಾಭಾವಿಕ ಸ್ವಭಾವವನ್ನಾಗಿ ಮಾಡಿಕೊಳ್ಳುವುದಕ್ಕೆ ಹೇಳಲಾಗುತ್ತದೆ- ಸಹಜ ಪುರುಷಾರ್ಥ ಕೇವಲ ನಾನೊಂದು ವಿಶೇಷ ಆತ್ಮನಾಗಿದ್ದೇನೆ- ಈ ಸ್ಮೃತಿ ಸ್ವರೂಪದಲ್ಲಿ ಸ್ಥಿತರಾದರೂ ಸಮರ್ಥ ಸ್ವರೂಪವಾಗಿಬಿಡುತ್ತದೆ. ವರ್ಷವಂತು ಪೂರ್ಣವಾಯಿತು, ಬಾಪ್‌ದಾದಾರವರಂತು ಆ ಫಲಿತಾಂಶವನ್ನು ನೋಡುವರಲ್ಲವೆ.

ಫಲಿತಾಂಶದಲ್ಲಿ ಯಥಾಶಕ್ತಿ ಮೆಜಾರಿಟಿ ಇದ್ದಾರೆ ಮತ್ತು ಸದಾ ಶಕ್ತಿಶಾಲಿಗೆ ಯಥಾಶಕ್ತಿಯ ಮೆಜಾರಿಟಿಯಲ್ಲಿ ಮೈನಾರಿಟಿ ಇದ್ದಾರೆ.

ಸ್ಮೃತಿ ದಿನವೂ ಸಹ ಬಹಳ ಸ್ನೇಹಯುಕ್ತವಾಗಿ ಆಚರಣೆ ಮಾಡಿದ್ದೀರಿ. ಈಗ ವಿಶೇಷವಾಗಿ ಹೇಗೆ ಸ್ನೇಹದಿಂದ ಆಚರಿಸಿದಿರೋ ಹಾಗೆಯೆ ಸ್ನೇಹದ ಪ್ರಮಾಣವಾಗಿ ತಂದೆಯ ಸಮಾನ ಸ್ಮೃತಿ ಸ್ವರೂಪರಾಗಲೇಬೇಕು. ಫಲಿತಾಂಶವನ್ನು ಕೇಳಿಸಿಕೊಂಡಿದ್ದೀರಾ? ಮುಂದೇನು ಮಾಡಬೇಕು? ಯಥಾಶಕ್ತಿಯೇ ಅಥವಾ ಸದಾ ಶಕ್ತಿ ಸ್ವರೂಪರೇ? ಹಾಗಾದರೆ ನೋಡುತ್ತೇವೆ. ಈ ವರ್ಷದಲ್ಲಿ ಮೆಜಾರಿಟಿ ಸದಾ ಶಕ್ತಿಶಾಲಿಯ ಪ್ರಮಾಣವನ್ನು ಎಲ್ಲಿಯವರೆಗೆ ಕೊಡುತ್ತೀರಿ? ನಿಮಿತ್ತ ಟೀಚರ್ಸ್ ಏನು ತಿಳಿಯುವಿರಿ? ಯಾವ ಸಾಲಿನಲ್ಲಿ ಬರುವಿರಿ? ಸದಾ ಶಕ್ತಿಶಾಲಿ. ಎಲ್ಲರ ಭಾವಚಿತ್ರವು ಟಿ.ವಿ.ಯಲ್ಲಿ ಬರುತ್ತಿದೆ. ಏನಾದರೂ ಆಗಬಹುದು, ಎಂತಹ ಪರಿಸ್ಥಿತಿಯೇ ಆಗಿಬಿಡಬಹುದು ಆದರೆ ಸದಾ ಶಕ್ತಿಶಾಲಿ ಆಗಿರಬೇಕು. ಯಾರು-ಯಾರು ಯಾವ ಗುಂಪಿನಲ್ಲಿ ಬಂದಿದ್ದಾರೆ ಎಂಬುದೆಲ್ಲವೂ ಹೆಸರಿನ ಸಹಿತವಾಗಿ ನೋಟ್ ಆಗುತ್ತದೆಯಲ್ಲವೇ? ಈಗ ಟೀಚರ್ಸ್‌ನ ಸಮ್ಮೇಳನ ಆಗುವುದಲ್ಲವೆ. ಅಲ್ಲಿಯವರೆಗೆ ಫಲಿತಾಂಶದಲ್ಲಿ ಎಲ್ಲಾ ನಿಮಿತ್ತ ಟೀಚರ್ಸ್ ಏನಾಗುವಿರಿ? ಯಾರು ಮಾಡಬೇಕಾಗುವುದೋ ಅದನ್ನು ಆಗ(ಯಾವಗಲೋ) ಎಂದು ಹೇಳುವುದಿಲ್ಲ. ಧೃಡ ಸಂಕಲ್ಪವೆಂದರೆ ಈಗ ಎಂದು ಮಾಡುವುದು. ಸಾಧಾರಣ ಸಂಕಲ್ಪದ ಅರ್ಥವಾಗಿದೆ- ಆಗ ಆಗಿಬಿಡುತ್ತದೆ. ಹಾಗಾದರೆ 'ಯಾವಾಗ' ಎನ್ನುವವರಾಗಿದ್ದೀರಾ ಅಥವಾ 'ಈಗ' ಮಾಡುವವರಾಗಿದ್ದೀರಾ? ಶಕ್ತಿಸೇನೆಯು ಬಹಳ ದೊಡ್ಡ ಸೇನೆಯಾಗಿದೆ. ಪಾಂಡವರು ತಮ್ಮನ್ನು ಏನೆಂದು ತಿಳಿಯುವಿರಿ? ಎಲ್ಲರ ಹೆಸರು ನೋಟ್ ಆಗಿದೆ. ಈಗ ಹೆಸರನ್ನು ಹೇಳುವುದಿಲ್ಲ. ಕೊನೆಗೆ ಹೆಸರನ್ನು ಹೇಳುವ ಸಮಯವು ಬಂದುಬಿಡುತ್ತದೆ. ತಿಳಿಯಿತೆ-

ಎಲ್ಲರಿಗಿಂತಲೂ ಹೆಚ್ಚು ಸಂಖ್ಯೆಯಲ್ಲಿ ಯಾವ ಝೋನಿನವರು ಬಂದಿದ್ದಾರೆ? ಪಂಜಾಬ್-ಇಂದೋರ್ ನವರು ಯಾವ ಚಮತ್ಕಾರ ಮಾಡಿ ತೋರಿಸುವಿರಿ? ಇದನ್ನು ನೋಡುತ್ತೇವೆ. ಟೀಚರ್ಸ್ ಸಹ ಹೆಚ್ಚಾಗಿಯೇ ಬಂದಿದ್ದಾರೆ. ಸಂಖ್ಯೆ ಹೆಚ್ಚಾಗಿದ್ದರೆ ಟೀಚರ್ಸ್ ಸಹ ಹೆಚ್ಚಾಗಿಯೇ ಇರುತ್ತಾರೆ. ಪಂಜಾಬಿನವರು ನಂಬರ್‌ವನ್ ತೆಗೆದುಕೊಳ್ಳುವಿರಾ ಅಥವಾ ಸೆಕೆಂಡ್ ನಂಬರ್ ತೆಗೆದುಕೊಳ್ಳುವಿರಾ? ಇಂದೋರಿನವರೂ ನಂಬರ್‌ವನ್ ತೆಗೆದುಕೊಳ್ಳುವಿರಾ? ಮತ್ತು ಕರ್ನಾಟಕದವರು ಏನು ಮಾಡುವಿರಿ? ಯಾವ ನಾಟಕವನ್ನು ತೋರಿಸುವಿರಿ? ಕರ್-ನಾಟಕ, ಅಂದರೆ ಹೀರೋ ನಾಟಕವನು ತೋರಿಸಬೇಕು. ಅಂತಿಂತಹ ನಾಟಕವನ್ನು ತೋರಿಸಬಾರದು. ಮತ್ತು ಮಹಾರಾಷ್ಟ್ರದವರಂತು ಮಹಾನರು ಆಗಿರುವಿರಲ್ಲವೇ? ಮತ್ತು ಯು.ಪಿ.,ಯವರಿಗೆ ಏನು ಹೇಳುತ್ತಾರೆ? ಯು..ಪಿ..ಯಲ್ಲಿ ನದಿಗಳಿವೆ ಅರ್ಥಾತ್ ಪತಿತರನ್ನು ಪಾವನ ಮಾಡುವವರು. ಪಾವನರಾಗುವ ಮತ್ತು ಮಾಡುವುದರಲ್ಲಿ ನಂಬರ್‌ವನ್. ಹಾಗಾದರೆ ಯು.ಪಿ..ಯವರೂ ಸಹ ನಂಬರ್‌ವನ್ ಆಗುವರು. ಈ ಸಮಯದಲ್ಲಂತೂ ಯಾರನ್ನೂ ಸಹ ನಂಬರ್ ಟು ಎಂದು ಹೇಳುವುದಿಲ್ಲ. ರಾಜಾಸ್ಥಾನದ ವರಂತು ಅವಶ್ಯವಾಗಿ ಅದೃಷ್ಟಶಾಲಿ ಆಗಿದ್ದಾರೆ, ರಾಜಾಸ್ಥಾನದಲ್ಲಿಯೇ ಚರಿತ್ರೆಯ ಭೂಮಿಯಿದೆ. ಪ್ರಧಾನ ಕೇಂದ್ರವೇ ರಾಜಾಸ್ಥಾನದಲ್ಲಿ ಇದೆಯಲ್ಲವೆ ಅಂದಮೇಲೆ ಎಲ್ಲಿ ಪ್ರಧಾನಕೇಂದ್ರವಿದೆಯೋ ಆದೇನಾಗುವುದು? ಪ್ರಾಧಾನ್ಯವಾಗುವುದಲ್ಲವೆ. ಎಲ್ಲರೂ ಖುಷಿಯಿಂದ ಹೇಳುತ್ತಿದ್ದಾರೆ- ನಂಬರ್‌ವನ್, ಆದರೆ ಅಲ್ಲ ಹೋಗಿ ಈ ರೀತಿ

ಹೇಳಬಾರದು- ಏನು ಮಾಡಲಿ. ಮಾಡಲು ಸಾಧ್ಯವಿಲ್ಲ.... ಅದನ್ನಂತು ಬಯಸುತ್ತಿಲ್ಲ ಆದರೆ ಆಗಿಬಿಡುತ್ತದೆ..... ಇಂತಹ ಭಾಷೆಯನ್ನು ಯೋಚಿಸಲೇಬಾರದು. ಡಬಲ್ ವಿದೇಶಿಗಳೂ ಸೇವೆಯಲ್ಲಿ ಬಹಳಚೆನ್ನಾಗಿ ಸ್ಪರ್ಧಿಸುತ್ತಿದ್ದಾರೆ ಮತ್ತು ನಂಬರ್‌ವನ್ ಬರಲೇಬೇಕಲ್ಲವೆ. ದೇಶದವರಿಗೂ ಧೈರ್ಯ ಕೊಡುವುದರಲ್ಲಿ ವಿದೇಶಿಯರು ಬಹಳಚೆನ್ನಾಗಿ ನಿಮಿತ್ತರಾಗಿದ್ದಾರೆ. ಇದರ ಕಾರಣದಿಂದ ವಿಶೇಷ ಶಕ್ತಿಯೂ ಸಿಗುತ್ತದೆ. ತಿಳಿಯಿತೆ! ಇದನ್ನೇ ಸ್ಮೃತಿಯಲ್ಲಿ ಇಟ್ಟುಕೊಂಡು ಸಹಜವಾಗಿ ವೃದ್ಧಿಯಾಗುತ್ತಿರಿ ಹಾಗೂ ವೃದ್ಧಿ ಹೊಂದುತ್ತಿರಿ. ಒಳ್ಳೆಯದು-

***ನಾಲ್ಕೂ ಕಡೆಯಲ್ಲಿರುವ ಸರ್ವ ವಿಶೇಷ ಆತ್ಮರಿಗೆ, ಸದಾ ಸಾಕಾರ ಬ್ರಹ್ಮಾ ತಂದೆಯ ಶ್ರೇಷ್ಠ ಕರ್ಮಗಳನ್ನು ಅನುಸರಿಸುವಂತಹ ಕರ್ಮಯೋಗಿ ಆತ್ಮರಿಗೆ, ಸದಾ ವಿಶೇಷತೆಯನ್ನು ಸ್ವಾಭಾವಿಕ ಹಾಗೂ ಸ್ವಭಾವವನ್ನಾಗಿ ಮಾಡುವಂತಹ ಕೋಟಿಯಲ್ಲಿ ಕೆಲವು ಆತ್ಮರಿಗೆ, ಸದಾ ಧೃಡ ಸಂಕಲ್ಪದ ಮೂಲಕ ವಿಶೇಷ ಜನ್ಮ, ಧರ್ಮ ಹಾಗೂ ಕರ್ಮದ ಸ್ಮೃತಿ ಸ್ವರೂಪ ಆತ್ಮರಿಗೆ ಬಾಪ್‌ದಾದಾರವರ ವಿಶೇಷತೆಯಿಂದ ಕೂಡಿರುವ ನೆನಪು-ಪ್ರೀತಿ ಹಾಗೂ ನಮಸ್ತೆ.**

**ದಾದಿಯವರೊಂದಿಗೆ ವಾರ್ತಾಲಾಪ.**

ತಾವು ಬ್ರಾಹ್ಮಣರೆಷ್ಟು ಸಂಪನ್ನರಾಗುತ್ತೀರೋ ಅಷ್ಟು ಭವಿಷ್ಯದಲ್ಲಿ ಪ್ರಕೃತಿಯೂ ಸಹ ಪ್ರಗತಿಯನ್ನು ಪ್ರಾಪ್ತಿ ಮಾಡುತ್ತದೆ ಏಕೆಂದರೆ ಪ್ರಕೃತಿಯು ಸಮಯ-ಸಮಯದಲ್ಲಿ ತನ್ನ ಸೂಚನೆಯನ್ನು ತೋರಿಸುತ್ತಿದೆ. ಅಂದಮೇಲೆ ಪ್ರಕೃತಿಯೆಷ್ಟು ಏರುಪೇರಿದೆಯೋ ಅಷ್ಟು ತಮ್ಮ ಅಚಲಸ್ಥಿತಿಯು ಪ್ರಕೃತಿಯನ್ನು ಪರಿವರ್ತನೆ ಮಾಡುತ್ತದೆ. ಸಮಯ- ಪ್ರತಿಸಮಯದಲ್ಲಿ ಎಷ್ಟೊಂದು ಆತ್ಮರ ದುಃಖದ ಪ್ರಕಂಪನಗಳಲ್ಲಿ ಬರುತ್ತದೆ ಅಂದಮೇಲೆ ಇಂತಹ ದುಃಖಿ ಆತ್ಮರಿಗೆ ಆಶ್ರಯವಂತು ತಂದೆ ಹಾಗೂ ತಾವೇ ಆಗಿರುವಿರಿ, ಹಾಗಾದರೆ ದಯೆ ಬರುತ್ತದೆಯಲ್ಲವೆ. ಯಾವಾಗ ಸಮಾಚಾರ ಕೇಳುತ್ತೀರೋ ಆಗ ಮನಸ್ಸಿನಲ್ಲೇನು ಬರುತ್ತದೆ? ಹೊಸದೇನಲ್ಲ, ತಮ್ಮ ಅಚಲ ಸ್ಥಿತಿಗಾಗಿ ಇದಂತು ಸರಿಯಿದೆ ಆದರೆ ಯಾವಾಗ ಪ್ರಕೃತಿಯ ಏರುಪೇರಿನಿಂದ ಆತ್ಮರು ಚೀರಾಡುತ್ತಾರೆಯೋ ಆಗ ಯಾರನ್ನು ಕರೆಯುತ್ತಾರೆ? ಯಾವಾಗ ದಯೆ, ಕರುಣೆಯನ್ನು ಬೇಡುತ್ತಾರೆಯೋ ಆಗ ತಾವುಗಳಿಗೆ ಅವರ ದಯೆತೋರಿ ಎಂಬ ಕೂಗು ತಲುಪುತ್ತದೆಯಲ್ಲವೆ! ಈ ಚಿಕ್ಕಪುಟ್ಟ ಅಪತ್ತುಗಳು ಇನ್ನೂ ಚಡಪಡಿಸುತ್ತದೆ. ಬ್ರಾಹ್ಮಣರು ಸಂಪನ್ನರಾಗಿಬಿಟ್ಟರೆ ದುಃಖದ ಪ್ರಪಂಚವು ಸಂಪನ್ನವಾಗಿಬಿಡುತ್ತದೆ. ಹಾಗಾದರೆ ದಯೆ ಬರುತ್ತದೆಯೇ ಅಥವಾ ಇಲ್ಲವೋ? ದಯೆ ಬರುತ್ತದೆಯೆಂದರೆ ಮತ್ತೇನು ಮಾಡುತ್ತೀರಿ? ಅವರಂತು ತಮ್ಮದೇ ಈಶ್ವರೀಯ ಪರಿವಾರದವರಲ್ಲವೆ. ಪರಿವಾರದ ಯಾವುದೇ ದುಃಖ, ಸುಖದಲ್ಲಿ ಪರಿವರ್ತನೆ ಮಾಡುವ ಸಂಕಲ್ಪವಂತು ಬರುತ್ತದೆಯಲ್ಲವೆ. ಪರಿವಾರರಲ್ಲಿ ಯಾರಿಗಾದರೂ ರೋಗ ಬಂದಿತೆಂದರೂ ಸಂಕಲ್ಪವೇನು ಬರುತ್ತದೆ? ಬೇಗನೆ ಗುಣಮುಖರಾಗಲಿ, ಹಾಗಾದರೆ ಚೀರಾಡುತ್ತಾ, ಚೀರಾಡುತ್ತಾ ಸಾಯುವುದು ಮತ್ತು ಒಂದೇಸಾರಿ ಪರಿವರ್ತನೆಯಾಗುವುದರಲ್ಲಿ ಅಂತರವಿದೆಯಲ್ಲವೆ. ಮಹಾವಿನಾಶ ಹಾಗೂ ರಿಹರ್ಸಲ್‌ನ ವಿನಾಶ. ಇದರಲ್ಲಿ ಅಂತರವಿದೆ. ಮಹಾವಿನಾಶವೆಂದರೆ ಮಹಾನ್ ಪರಿವರ್ತನೆ. ಇದಕ್ಕೆ ತಾವು ನಿಮಿತ್ತರಾಗಿದ್ದೀರಿ. ಸಂಪನ್ನರಾಗುತ್ತೀರೆಂದರೆ ಸಮಾಪ್ತಿಯಾಗುವುದು. ಹಾಗಾದರೆ ಯಾರು ಬೇಸರವಾಗಿದ್ದಾರೆಯೋ ಅವರಂತು ತಿಳಿಯುವರು ಪ್ರತ್ಯಕ್ಷತೇರು ಪರದೆಯು ತೆರೆಯಿತು ಆದರೆ ವೇದಿಕೆಯಲ್ಲಿ ಬರುವಂತಹ ಹೀರೊ ಪಾತ್ರಧಾರಿಯು ಸಂಪನ್ನ ತಯಾರಿ ಆಗಬೇಕಲ್ಲವೆ, ಹಾಗಾದರೆ

ಪರದೆಯನ್ನು ತೆರೆಯುತ್ತೀರಾ ಅಥವಾ ಅರ್ಧದಲ್ಲಿಯೇ ತೆರೆದುಬಿಡುತ್ತದೆಯೇ? ಪರಿವರ್ತನೆಯ ಶುಭಭಾವನೆಯನ್ನು ತೀವ್ರಗೊಳಿರಬೇಕು ಅರ್ಥಾತ್ ತಮ್ಮನು ತೀವ್ರಗತಿಯಿಂದ ಸಂಪನ್ನವನ್ನಾಗಿ ಮಾಡಬೇಕಾಗಿದೆ. ತಾವೂ ಸಹ ಕೆಲವೊಮ್ಮೆ ಹೇಗೋ. ಕೆಲವೊಮ್ಮೆ ಹೇಗೋ ಇರುತ್ತೀರೆಂದರೆ, ಪ್ರಕೃತಿಯೂ ಸಹ ಕೆಲವೊಮ್ಮೆ ಬಹಳ ತೀವ್ರಗತಿಯಿಂದ ಕಾರ್ಯ ಮಾಡಿದರೆ, ಕೆಲವೊಮ್ಮೆ ತಣ್ಣಗಾಗಿಬಿಡುತ್ತದೆ. ಈಗ ಏನು ಮಾಡಬೇಕು? ದಯಾ ಭಾವನೆಯು ಸ್ಮೃತಿಯಲ್ಲಿರಲಿ, ಭಲೆ ಸ್ವಯಂಗಾಗಿ, ಸರ್ವ ಆತ್ಮರಿಗಾಗಿ ಉಪಯೋಗಿಸಬೇಕು. ಎಲ್ಲಿ ದಯೆಯಿರುತ್ತದೆಯೋ ಅಲ್ಲಿ ನನ್ನದು-ನಿನ್ನದರುವುದಿಲ್ಲ ಏರುಪೇರಿರುವುದಿಲ್ಲ. ಪೂಜ್ಯ ಸ್ವರೂಪ, ದಯಾಸ್ವರೂಪವನ್ನು ಧಾರಣೆ ಮಾಡಿಕೊಳ್ಳಿರಿ. ಸರಿಯಲ್ಲವೆ. ಪ್ರತೀ ಸಂಕಲ್ಪದಲ್ಲಿಯೂ ದಯಾಪೂರ್ಣರು, ಈಗ ಈ ಪ್ರಕಂಪನಗಳನ್ನು ಹರಡಿಸಿ. ಸಂಕಲ್ಪದಲ್ಲಿದ್ದರೆ ವಾಣಿ ಹಾಗೂ ಕರ್ಮದಲ್ಲಿ ಸ್ವತಹವಾಗಿಯೇ ಬರುತ್ತದೆ. ಎಲ್ಲರೂ ಚೀರಾಡುವುದೂ ಸಹ ಏನು? ದಯೆ-ದಯೆ ತೋರಿಸಿರಿ. ಒಳ್ಳೆಯದು-

**ಅವ್ಯಕ್ತ ಬಾಪ್‌ದಾದಾರವರ ವ್ಯಕ್ತಿಗತ ವಾರ್ತಾಲಾಪ.**

ಮಾಯೆಯ ನೆರಳಿನಿಂದ ಪಾರಾಗುವ ಸಾಧನವಾಗಿದೆ- ಬಾಪ್‌ದಾದಾರವರ ಛತ್ರಛಾಯೆ.

ತಮ್ಮನ್ನು ಸದಾ ಬಾಪ್‌ದಾದಾರವರ ಛತ್ರಛಾಯೆಯಲ್ಲಿರುವ, ಸದಾ ಸುರಕ್ಷಿತವಾದ ಆತ್ಮರೆಂದು ಅನುಭವ ಮಾಡುತ್ತೀರಾ? ಸದಾ ಛತ್ರಛಾಯೆಯಿದೆಯೇ ಅಥವಾ ಕೆಲವೊಮ್ಮೆ ಹೊರಗೆ ಹೋಗಿಬಿಡುತ್ತೀರಾ? ಅಥವಾ ಮಾಯೆಯ ಛತ್ರಛಾಯೆಯಿದೆಯೇ ಅಥವಾ ಮಾಯೆಯ ಛಾಯೆಯೇ? ಹಾಗಾದರೆ ಮಾಯೆಯ ಛಾಯೆಯಿಂದ ಪಾರಾಗುವ ಸಾಧನವಾಗಿದೆ- ತಂದೆಯ ಛತ್ರಛಾಯೆ. ಇದರಲ್ಲಿರುವವರು ಎಷ್ಟೊಂದು ಖುಷಿಯಾಗಿ ಇರುತ್ತಾರೆ ಏಕೆಂದರೆ ನಿಶ್ಚಿಂತ ಚಕ್ರವರ್ತಿ ಆಗಿಬಿಟ್ಟರಲ್ಲವೆ. ಚಿಂತೆಯಿದ್ದರೆ ಖುಷಿ ಮಾಯಾವಾಗಿಬಿಡುತ್ತದೆ, ಕೆಲವೊಮ್ಮೆ ನೋಡಿ ಖುಷಿ ಮಾಯ ಮಾಡಿಬಿಡುತ್ತಾರೆ ಮತ್ತು ಬಲಹೀನರಾದರೆ ಮಾಯೆಯ ನೆರಳಿನ ಪ್ರಭಾವವುಂಟಾಗುತದೆ, ಬಲಹೀನರು ಮಾಯೆಯನ್ನು ಆಹ್ವಾನ ಮಾಡುತ್ತಾರೆ. ಹೇಗೆ ದೈಹಿಕ ಬಲಹೀನರು ರೋಗಗಳ ಆಹ್ವಾನ ಮಾಡುತ್ತಾರೆಯೋ ಹಾಗೆಯೇ ಆತ್ಮಿಕ ಬಲಹೀನರು ಮಾಯೆಯ ಆಹ್ವಾನ ಮಾಡುತ್ತಾರೆ. ನಂತರ ಆ ಛಾಯೆಯಿಂದ ಹೊರಬರುವುದಕ್ಕಾಗಿ ಏಷ್ಟೊಂದು ಕಷ್ಟ ಪಡಬೇಕಾಗುತ್ತದೆ. ಒಂದುವೇಳೆ ಮಾಯೆಯ ಛಾಯೆಯು ಸ್ವಪ್ನದಲ್ಲಿ ಉಂಟಾದರೂ, ಅದೂ ಸಹ ಬೇಸರಪಡಿಸುತ್ತದೆ. ನಂತರ ಬ್ರಾಹ್ಮಣರಿಂದ ಕ್ಷತ್ರಿಯರಾಗಿಬಿಟ್ಟರೆ ಯುದ್ಧ ಮಾಡಬೇಕಾಗುತ್ತದೆ. ಕ್ಷತ್ರಿಯ ಜೀವನವು ಪರಿಶ್ರಮದ್ದಾಗಿದೆ ಮತ್ತು ಬ್ರಾಹ್ಮಣ ಜೀವನವು ಖುಷಿಯದ್ದಾಗಿದೆ. ಹಾಗಾದರೆ ಯಾವುದನ್ನು ಬಯಸುವಿರಿ? ಕೆಲವೊಮ್ಮೆ ಯುದ್ಧ ಮಾಡಬೇಕಾಗುತ್ತದೆಯೇ? ಯುದ್ಧ ಮಾಡುವುದು ಪ್ರಿಯವೆನಿಸುತ್ತದೆಯೇ? ಬಾಲ್ಯದಿಂದಲೂ ವ್ಯರ್ಥಸಂಕಲ್ಪದ ನೆರಳು ಎಷ್ಟೊಂದು ಪರಿಶ್ರಮ ಮಾಡಿಸುತ್ತದೆ ಆದ್ದರಿಂದ ಸದಾ ತಂದೆಯ ನೆನಪಿನ ಛತ್ರಛಾಯೆಯಲ್ಲಿರಿ, ಇರದಿದ್ದರೆ ಸದಾಕಾಲಕ್ಕಾಗಿ ಮಾಯೆಯ ಛತ್ರಛಾಯೆಯಲ್ಲಿಯೇ ಇರಬೇಕಾಗುತ್ತದೆಯೇ? ಕೆಲವೊಮ್ಮೆಗಾಗಿ ಅಲ್ಲ. ಸದಾ. ಅವಿನಾಶಿ ತಂದೆಯಲ್ಲ ಹಾಗಾದರೆ ಆಸ್ತಿಯೂ ಸದಾಕಾಲದ್ದನ್ನೇ ತೆಗೆದುಕೊಳ್ಳಬೇಕು. ಸದಾ ಖುಷಿಯಾಗಿರುವವರು, ಛತ್ರಛಾಯೆ ಅರ್ಥಾತ್ ಖುಷಿಯಾಗಿರುವುದು. ನಿಶ್ಚಿಂತರಾಗಿ ಇರುತ್ತೀರಲ್ಲವೆ. ಎಲ್ಲಾ ಚಿಂತೆಗಳನ್ನು ತಂದೆಗೆ ಕೊಟ್ಟಿದ್ದೀರಾ ಅಥವಾ ಒಂದೆರಡನ್ನು ಸಂಭಾಲನೆ ಮಾಡಿಕೊಳ್ಳುವಿರಾ? ಏನು ಮಾಡಲಿ..... ಹೇಗೆ ಮಾಡಲಿ. ಈ ಶಬ್ದಗಳು ಚಿಂತೆಯ

ಶಬ್ದಗಳಾಗಿವೆ. ನಿಶ್ಚಿಂತತೆಯ ಮಾತು ಸದಾ ವಿಜಯದ್ದಾಗಿದೆ. 'ಏನು', 'ಹೇಗೆ' ಈ ಶಬ್ದಗಳಿರುವುದಿಲ್ಲ ಅಂದಮೇಲೆ ಸದಾ ನೆನಪಿಟ್ಟುಕೊಳ್ಳಿರಿ- ನಾವೆಲ್ಲರೂ ತಂದೆಯ ಛತ್ರಛಾಯೆಯಲ್ಲಿರುವವರು, ಪರಿಕ್ರಮಣ ಹಾಕುವವರಲ್ಲ. ಸಂಕಲ್ಪದಲ್ಲಿ ಪರಿಕ್ರಮಣದಲ್ಲಿ ಬಂದರೂ ಪುಡಿಪುಡಿ ಆಗಿಬಿಡುತ್ತೀರಿ, ತಾವಂತು ಅಮರರಲ್ಲವೆ. ಅಮರರಾಗಿದ್ದೇವೆ- ಈ ಸ್ಮೃತಿಯು ಸದಾಕಾಲವೂ ಸ್ವಯಂ ಸಹ ನಿಶ್ಚಿಂತ ಹಾಗಾ ಅನ್ಯರನ್ನೂ ನಿಶ್ಚಿಂತರನ್ನಾಗಿ ಮಾಡುತ್ತಿರುತ್ತದೆ. ಸದಾ ಖುಷಿಯಲ್ಲಿ ಈ ಹಾಡನ್ನು ಹಾಡುತ್ತಾ ಇರುತ್ತೀರಿ ಪಡೆಯಬೇಕಾದುದನ್ನು ಪಡೆದೆವು. ಮಗುವಾಗುವುದು ಅರ್ಥಾತ್ ಪಡೆಯುವುದಾಗಿದೆ, ಪಡೆದುಬಿಟ್ಟೆವು. ಒಳ್ಳೆಯದು!

ರಿವೈಸ್ ಕೋರ್ಸ್ 25-01-1994.

***ವಿಶೇಷತೆಯೇ ಬ್ರಾಹ್ಮಣರ ಸ್ವಭಾವವಾಗಿದೆ - ಇದನ್ನು ಸ್ವಾಭಾವಿಕವಾಗಿ ಸ್ಮೃತಿ ಸ್ವರೂಪವನ್ನಾಗಿ ಮಾಡಿಕೊಳ್ಳಿರಿ.***

ಜೀವನ ಅರ್ಥಾತ್ ಸದಾ ಹಾಗೂ ಸ್ವತಹವಾಗಿ ಇರುವುದು. ಸ್ಮೃತಿಯಲ್ಲಿ ಬಂದಾಗ ವಿಶೇಷ ಜೀವನದ ಅನುಭವ ಮಾಡಿ ವಿಸ್ಮೃತಿಯಾದಾಗ ವಿಶೇಷತೆಗೆ ಬದಲಾಗಿ ಸಾಧಾರಣ ಜೀವನಧ ಅನುಭವಾಯಿತೆಂದರೆ ಇದು ವಿಶೇಷ ಆತ್ಮರ ವಿಶೇಷತೆಯಲ್ಲ. ಬ್ರಾಹ್ಮಣ ಜನ್ಮವಾಗುತ್ತಿದ್ದಂತೆಯೇ ವಿಶೇಷ ಜನ್ಮವಾಯಿತು ಯಾರ ಜನ್ಮವೇ ವಿಶೇಷವಾಗಿದೆಯೋ ಅವರ ಜೀವನ ಹೇಗಿರುತ್ತದೆ ವಿಶೇಷವಾಗಿರುತ್ತದೆ ಅಲ್ಲವೇ ಕರ್ಮವನ್ನು ಅನುಸರಿಸಲು ವಿಶೇಷವಾಗಿ ಆದಿ ಆತ್ಮ ಬ್ರಹ್ಮ ತಂದೆಯು ಉದಾಹರಣೆಯಾಗಿರುವುದರಿಂದ ಬ್ರಾಹ್ಮಣರ ಕರ್ಮವು ವಿಶೇಷವಾಗಿದೆ. ಎಂದು ತಿಳಿಸುತ್ತಾ ಶಿವ ಪರಮಾತ್ಮ ಹೇಳಿರುವ ಮಹಾ ವಾಕ್ಯಗಳಿಂದ ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನು ಆತ್ಮ ಶಾಂತ ಸ್ವರೂಪ, ಶಿವ ಪರಮಾತ್ಮನನ್ನ ತಂದೆ.

1. ನನಗೆ ಡ್ರಾಮಾದಲ್ಲಿ ವಿಶೇಷ ಪಾತ್ರವಿದೆ ಎಂದು ಪ್ರತೀ ಹೆಜ್ಜೆಯಲ್ಲಿ, ಪ್ರತೀ ಕರ್ಮದಲ್ಲಿ, ಪ್ರತೀ ಸಂಕಲ್ಪದಲ್ಲಿ ಅನುಭವ ಮಾಡಿಕೊಳ್ಳುತ್ತಿದ್ದೇನೆ.

2. ನನ್ನ ವಿಶೇಷವಾದ ಬ್ರಾಹ್ಮಣ ಜೀವನದಲ್ಲಿ ಜನ್ಮವು ಶ್ರೇಷ್ಠವಾಗಿದೆ, ಧರ್ಮವು ಶ್ರೇಷ್ಠವಾಗಿದೆ, ಹಾಗೂ ಕರ್ಮವೂ ಶ್ರೇಷ್ಠವಾಗಿದೆ.

3. ನಾನು ಕರ್ಮದಲ್ಲಿ ಬ್ರಹ್ಮಾ ತಂದೆಯನ್ನು ಅನುಸರಿಸಿ ತಂದೆಯ ಸಮಾನವಾಗಿ ತಯಾರಾಗುವ ಬಾಪ್‌ಸಮಾನ ಸ್ವರೂಪ.

4. ನಾನು ಬ್ರಾಹ್ಮಣ ಜೀವನದಲ್ಲಿ ವಿಶೇಷತೆಯನ್ನು ಸಹಜವಾಗಿ, ಸ್ವಾಭಾವಿಕವಾಗಿ, ಸ್ವಭಾವವನ್ನಾಗಿ ಮಾಡಿಕೊಂಡಿದ್ದೇನೆ.

5. "ಪರಿಶ್ತಾ ಭವ" ಎಂಬ ವರದಾನದಿಂದ ನಾನೂ ತಂದೆಯ ಸಮಾನ ಸಂಪನ್ನವಾಗಿ ಇತರರನ್ನೂ ತಯಾರು ಮಾಡುವ ಅವ್ಯಕ್ತ ಪರಿಶ್ತಾ.

6. ನಾನು ಲಕ್ಷ್ಯ ಮತ್ತು ಲಕ್ಷಣಗಳಲ್ಲಿ ಸಮಾನವಾಗಿ ಇರುವ ಸಂಪನ್ನ ಸ್ವರೂಪ.

7. ಸಮಯದ ವೇಗಕ್ಕಿಂತ ನನ್ನ ಪರಿವರ್ತನೆಯ ವೇಗ ತೀವ್ರವಾಗಿ ಇದೆ.

8. ನಾನು ಸಂಸ್ಕಾರ ಹಾಗೂ ಸಂಸಾರದೊಂದಿಗೆ ಸಂಬಂಧವಿಲ್ಲದ, ಸಂಬಂಧ, ದೇಹದ, ವ್ಯಕ್ತಿಯ, ವಸ್ತುವಿನ, ಹಳೆಯ ಸಂಸ್ಕಾರದ (ಸಂಕಲ್ಪ, ವೃತ್ತಿಯ, ವಾಣಿಯ, ಸಂಬಂಧ ಸಂಪರ್ಕದ, ಕರ್ಮದ ರೂಪದಲ್ಲಿ) ಕಡೆ ಆಕರ್ಷಣೆ ಇಲ್ಲದೇ ಹಗುರವಾಗಿರುವ ಡಬಲ್ ಲೈಟ್ ಫರಿಶ್ತಾ.

9. ನಾನು ವ್ಯರ್ಥ ಸಮಯ, ವ್ಯರ್ಥ ಸಂಗ, ವ್ಯರ್ಥ ವಾತಾವರಣ, ಬ್ರಾಹ್ಮಣ ಪರಿವಾರದ ಸಂಬಂಧದಲ್ಲಿ, ಸೇವೆಯ ಸಂಬಂಧದಲ್ಲಿ, ಹಗುರತೆಯನ್ನು ಅನುಭವ ಮಾಡುವ ಫರಿಶ್ತಾ ಸ್ಥಿತಿಯ ತೀವ್ರಗತಿಯ ಸ್ಥಿತಿಯಲ್ಲಿದ್ದೇನೆ.

10. ನಾನು ವಿಶೇಷಾತ್ಮ ಎಂಬ ಸ್ಮೃತಿ ಸ್ವರೂಪದಲ್ಲಿರುವ ಸಮರ್ಥ ಸ್ವರೂಪ.

11. ನಾನು ಈಗಲೇ ಎಂಬ ದೃಢಸಂಕಲ್ಪದಿಂದ ಸದಾ ಶಕ್ತಿಶಾಲಿಯ ಪ್ರಮಾಣವನ್ನು ಕೊಟ್ಟಿದ್ದೇನೆ.

12. ನಾನು ಇತರರಿಗೆ ಧೈರ್ಯವನ್ನು ಕೊಟ್ಟು ತಂದೆಯಿಂದ ವಿಶೇಷ ಶಕ್ತಿಯನ್ನು ಪಡೆದಿದ್ದೇನೆ.